**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ.12**

**ಚಾ.ಸಾ. 13**

| | | |
|---|---|---|
| ಸಾಕ್ಷಿದಾರರ ಹೆಸರು | - | ರಿಜ್ವಾನ್ ಅಹಮ್ಮದ್ |
| ತಂದೆಯ ಹೆಸರು | - | ರಜಬ್ ಅಲಿ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಗುಂಡಿಬೈಲು |

ದಿನಾಂಕಃ 30-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಚಾಸಾ 23 ನನ್ನ ಸ್ನೇಹಿತ. ನನ್ನ ಹತ್ತಿರ ಟಾಯಿಟಾ ಇಟಿಯೇಸ್ ಕಾರು ನಂಬರ್ KA-20-Z-7586 ಇದೆ. ಸದ್ರಿ ಕಾರನ್ನು ಚಾಸಾ 23 ರವರು 2017 ರಲ್ಲಿ ನನ್ನಲ್ಲಿ ಕೇಳಿದರು. ನಂತರ ಸದ್ರಿ ಕಾರನ್ನು ನನಗೆ ವಾಪಾಸ್ಸು ನೀಡಿಲ್ಲ. ನಾನು ಚಾಸಾ23 ರವರನ್ನು ವಿಚಾರಿಸಿದಾಗ ನನ್ನ ಸ್ನೇಹಿತನಿಗಗೆ ಕೊಟ್ಟಿದ್ದೇನೆ ಹೇಳಿದ್ದು , 2 ದಿನ ಬಿಟ್ಟು ಕೊಡುವುದಾಗಿ, ಆ ವ್ಯಕ್ತಿಗೆ ಕರೆ ಮಾಡಿದಾಗ ಸ್ವೀಕರಿಸುವುದಿಲ್ಲ ಎಂದು ಹೇಳಿದನು. ನಂತರ ನನ್ನ ಕಾರು ಮಣಿಪಾಲದ ಮಣ್ಣಪಳ್ಳದ ಬಳಿ ಇದೆ ಎಂದು ಮಾಹಿತಿ ಬಂತು. ವಿಚಾರ ತಿಳಿದು ನಾನು ಅಲ್ಲಿಗೆ ಹೋದೆನು. ಸದ್ರಿ ಕಾರು ಅಲ್ಲಿ ನಿಂತಿದ್ದು, ಅದು ಲಾಕ್ ಅಗಿತ್ತು. ನಂತರ ಬ್ಯಾಂಕ್ ಗೆ ಹೋಗಿ ಇನ್ನೊಂದು ಕೀ ತಂದು ಕಾರನ್ನು ತರೆದೆನು. ಕಾರಿನ ಕೀ ಬೋನೆಟ್ ನಲ್ಲಿ ಇತ್ತು ನಂತರ ಕಾರನ್ನು ಮನೆಗೆ ತೆಗೆದುಕೊಂಡು ಬಂದೆನು. ನಂತರ 2 ದಿನ ಬಿಟ್ಟು ಹಿರಿಯಡ್ಕ ಪೊಲೀಸ್ ಠಾಣೆಯವರು ನನಗೆ ಕರೆ ಮಾಡಿ ಕಾರನ್ನು ಹಾಜರುಪಡಿಸುವಂತೆ ತಿಳಿಸಿದರು. ಸದ್ರಿ ಕಾರು ಕೊಲೆ ಪ್ರಕರಣದಲ್ಲಿ ಭಾಗಿ ಆಗಿರುವುದಾಗಿ ತಿಳಿಸಿದರು.

ನಂತರ ನಾನು ಕಾರನ್ನು ಠಾಣೆಗೆ ಹಾಜರುಪಡಿಸಿದ ನಂತರ ಪೊಲೀಸರು ಪಂಚನಾಮೆಯನ್ನು ಬರೆದು ಕಾರನ್ನು ಸ್ವಾಧೀನಪಡಿಸಿದರು. ಸಾಕ್ಷಿಯು ಪಂಚನಾಮೆಯನ್ನು

ನೋಡಿ ಗುರುತಿಸಿದ್ದು ಅದನ್ನು ನಿ.ಪಿ.31 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ನನ್ನ ಕಾರನ್ನು ಮಾನ್ಯ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿರುತ್ತೇನೆ. ಸಾಕ್ಷಿಗೆ ಕಾರಿನ ಭಾವಚಿತ್ರವನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾಲು 1 ಎಂದು ಗುರುತಿಸಲಾಯಿತು.

**2 ನೇ ಆರೋಪಿತ ಪರವಾಗಿ ಪಾಟೀ ಸವಾಲುಃ ಶ್ರೀ ಆರ್ ಪಿ ವಕೀಲರಿಂದ ಃ**

ಚಾಸಾ 23 ರವರಿಗೆ ಯಾವ ದಿನ ಕಾರನ್ನು ಕೊಟ್ಟಿರುತ್ತೇನೆ ಎಂದು ಹೇಳಲಾಗುವುದಿಲ್ಲ. ನಂತರ ಚಾಸಾ 23 ರವರು ಕಾರನ್ನು ಯಾರಿಗೆ ಕೊಟ್ಟಿರುತ್ತಾರೆ ಎಂದು ಸ್ವತಃ ಮಾಹಿತಿ ಇಲ್ಲ. ಚಾಸಾ 23 ರವರು ಸ್ವಂತ ಉಪಯೋಗಕ್ಕೆ ಬೇಕು ಎಂದು ಕಾರನ್ನು ತೆಗೆದುಕೊಂಡು ಹೋಗಿದ್ದಾರೆ. ಠಾಣೆಯವರು ಕರೆ ಮಾಡಿ ಕಾರ ಮಣ್ಣಪಳ್ಳ ದಲ್ಲಿ ನಿಂತಿದೆ ಎಂದು ಹೇಳಿದರು. ಅಲ್ಲಿ ಕಾರು ಯಥಾಸ್ಥಿತಿಯಲ್ಲಿ ಇತ್ತು. ನಂತರ ಕಾರನ್ನು ಮರುದಿನ ಕಾರನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ. ಠಾಣೆಯಲ್ಲಿ ಪೊಲೀಸರು ಕಾರನ್ನು ವಶಪಡಿಸಿದಾಗ ಯಾವುದೇ ಕುರುಹುಗಳು ಕಂಡು ಬಂದಿರುವುದಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿದೆ ಎಂದು ಹೇಳಲಾಗುವುದಿಲ್ಲ. ದಾಖಲೆಯನ್ನು ತಯಾರಿಸಿದ ಪೊಲೀಸ್ ಅಧಿಕಾರಿ ಯಾರು ಎಂದು ಹೇಳಲಾಗುವುದಿಲ್ಲ. ನಾನಲ್ಲದೇ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ. ತಕ್ಷೀರಿಗೆ ಸಂಬಂಧಿಸಿದಂತೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾ ಉಳಿದ ಆರೋಪಿತ ಪರವಾಗಿ ಃ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ. C/C